ಕರ್ನಾಟಕ ಸರ್ಕಾರ

ಸಂಖ್ಯೆ:ಸಕಇ 171 ಎಂಡಿಎಸ್ 2013

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:24.04.2017

## ಸುತ್ತೋಲೆ

ವಿಷಯ: ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಮಾದರಿ/ ಅಟಲ್ ಬಿಹಾರಿ ವಾಜಪೇಯಿ ಮತ್ತು ಇತರ ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಲು ಮೀಸಲಾತಿಯನ್ನು ನಿಗಧಿಪಡಿಸುವ ಬಗ್ಗೆ.

*****

ಮೇಲ್ಕಂಡ ವಸತಿ ಶಾಲೆಗಳನ್ನು ನಡೆಸಲು ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ವತಿಯಿಂದ ಅನುದಾನವನ್ನು ಒದಗಿಸಲಾಗುತ್ತಿದೆ. ಆದ್ದರಿಂದ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಶಾಲೆಗಳೆಂದು ಪ್ರತ್ಯೇಕಿಸಲಾಗಿರುತ್ತದೆ. ಕಾರಣ ಈ ಕೆಳಗಿನಂತೆ ಒಂದೇ ರೀತಿ ಮೀಸಲಾತಿಯನ್ನು 2017-18ನೇ ಸಾಲಿನಿಂದ ಜಾರಿಗೆ ಬರುವಂತೆ 6ನೇ ತರಗತಿಯಿಂದ ಪ್ರವೇಶ ನೀಡಲು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ನಿರ್ದೇಶನ ನೀಡಲಾಗಿದೆ:-

| ಶಾಲೆಗಳ ಹೆಸರು | 6ನೇ ತರಗತಿಯಲ್ಲಿ ಸೀಟುಗಳ ಸಂಖ್ಯೆ | ಎಸ್.ಸಿ. ವಿದ್ಯಾರ್ಥಿಗಳು | ಎಸ್.ಟಿ. ವಿದ್ಯಾರ್ಥಿಗಳು | ಬಿ.ಸಿ. ವಿದ್ಯಾರ್ಥಿಗಳು |
|---|---|---|---|---|
| 1)ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ/ ಅಟಲ್ ಬಿಹಾರಿ ವಾಜಪೇಯಿ ಮತ್ತು ಶಿಕ್ಷಣ ಇಲಾಖೆಯಿಂದ ವರ್ಗಾವಣೆಯಾದ ಶಾಲೆಗಳಲ್ಲಿ (ಸಮಾಜ ಕಲ್ಯಾಣ ಇಲಾಖೆಯಿಂದ ಅನುದಾನ ನೀಡುತ್ತಿರುವುದು) | 50 | 75% | 10% | 15% |
| 2)ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ/ ಅಟಲ್ ಬಿಹಾರಿ ವಾಜಪೇಯಿ ಶಾಲೆಗಳಲ್ಲಿ (ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆಯಿಂದ ಅನುದಾನ ನೀಡುತ್ತಿರುವುದು) | 50 | 10% | 75% | 15% |
| 3)ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ/ಅಟಲ್ ಬಿಹಾರಿ ವಾಜಪೇಯಿ/ಹುತಾತ್ಮಕ ವಸತಿ ಶಾಲೆಗಳಲ್ಲಿ (ಬಿ.ಸಿ.ಇ.ಯಿಂದ ಅನುದಾನ ನೀಡುತ್ತಿರುವುದು) | 50 | 15% | 10% | 75% |
| 4)ಏಕಲವ್ಯ ಮಾದರಿ ವಸತಿ ಶಾಲೆ- ಪ.ಪಂ.ಇ.ಯಿಂದ ಅನುದಾನ ನೀಡುತ್ತಿರುವುದು | 60 | 10% | 75% | 15% |

...2

ಇತರೆ ಮೀಸಲಾತಿ ಇತ್ಯಾಧಿ:

1) ಒಟ್ಟಾರೆ ಅಂಗವಿಕಲರಿಗೆ – 3% (ಪ್ರವೇಶ ಪರೀಕ್ಷೆ ಮುಖಾಂತರ ದಾಖಲಾತಿ)
2) ಅಲೆಮಾರಿ, ಅರೆಅಲೆಮಾರಿ, ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ವರ್ಗದವರಿಗೆ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗಗಳು)– 10% (ಪ್ರವೇಶ ಪರೀಕ್ಷೆ ಇಲ್ಲದೆ ನೇರ ದಾಖಲಾತಿ)
3) ಸಫಾಯಿ ಕರ್ಮಚಾರಿಗಳ ಮಕ್ಕಳಿಗೆ – 05% (ಪ್ರವೇಶ ಪರೀಕ್ಷೆ ಇಲ್ಲದೆ ನೇರ ದಾಖಲಾತಿ)
4) ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳಿಂದ ನಡೆಸುತ್ತಿರುವ ಆಶ್ರಮ ಶಾಲೆ ವಿದ್ಯಾರ್ಥಿಗಳಿಗೆ – 05% (ಪ್ರವೇಶ ಪರೀಕ್ಷೆ ಇಲ್ಲದೇ ನೇರ ದಾಖಲಾತಿ).
5) ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆ ನಡೆಸುತ್ತಿರುವ ಆಶ್ರಮ ಶಾಲೆ ವಿದ್ಯಾರ್ಥಿಗಳಿಗೆ – ಏಕಲವ್ಯ ಮಾದರಿ/ಇತರೆ ಪರಿಶಿಷ್ಟ ಪಂಗಡ ವಸತಿ ಶಾಲೆಗಳಲ್ಲಿ – 15% (ಪ್ರವೇಶ ಪರೀಕ್ಷೆ ಇಲ್ಲದೇ ನೇರ ದಾಖಲಾತಿ).
6) ವಿಶೇಷ ದುರ್ಬಲ ವರ್ಗಗಳಾದ ದೇವದಾಸಿ/ಯೋಜನಾ ನಿರಾಶ್ರಿತರ/ ಹೆಚ್.ಐ.ವಿ. ಪೀಡಿತರ/ತಂದೆ ಅಥವಾ ತಾಯಿ ಇಲ್ಲದ (Single Parent) ಅವರುಗಳ ಮಕ್ಕಳಿಗೆ ಮತ್ತು ಅನಾಥ/ಬಾಲ ಕಾರ್ಮಿಕ ಮಕ್ಕಳಿಗೆ – 05% (ಪ್ರವೇಶ ಪರೀಕ್ಷೆ ಇಲ್ಲದೇ ನೇರ ದಾಖಲಾತಿ).
7) ಮಾಜಿ ಸೈನಿಕರ/ಸೈನಿಕರ ಮಕ್ಕಳಿಗೆ – 5% (ಪ್ರವೇಶ ಪರೀಕ್ಷೆ ಮುಖಾಂತರ ದಾಖಲಾತಿ)
8) ಮೇಲ್ಕಂಡ ವರ್ಗಗಳಲ್ಲಿ ಭರ್ತಿಯಾಗದೇ ಉಳಿದಿರುವ ಸೀಟುಗಳನ್ನು ಎಸ್.ಸಿ/ಎಸ್.ಟಿ ಮತ್ತು ಬಿ.ಸಿ. ವಿದ್ಯಾರ್ಥಿಗಳಿಂದ ಅವರವರ ಅನುಪಾತದಲ್ಲಿ ಭರ್ತಿ ಮಾಡುವುದು.
9) ಆಯಾ ತಾಲ್ಲೂಕುಗಳಲ್ಲಿರುವ ವಸತಿ ಶಾಲೆಗಳಲ್ಲಿ ಅದೇ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಶೇ.100 ರಷ್ಟು ಪ್ರವೇಶ ನೀಡುವುದು. ಒಂದು ವೇಳೆ ಭರ್ತಿಯಾಗದೇ ಸೀಟುಗಳು ಉಳಿದಿದ್ದಲ್ಲಿ ಪಕ್ಕದ ತಾಲ್ಲೂಕು ಮತ್ತು ಪಕ್ಕದ ಜಿಲ್ಲೆಗಳ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದು.
10) ಶಾಲಾ ಕಟ್ಟಡಗಳು ಪೂರ್ಣಗೊಂಡಿರುವ ಏಕಲವ್ಯ ಮಾದರಿ ಶಾಲೆಗಳಲ್ಲಿ 6 ರಿಂದ 8ನೇ ತರಗತಿಗಳಿಗೆ ಸಹ ಅರ್ಹ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸುವುದು.
11) ಶಾಲಾ ಕಟ್ಟಡಗಳು ಪೂರ್ಣಗೊಂಡಿರುವ ವಸತಿ ಶಾಲೆಗಳಲ್ಲಿ ಸಹ 7 ಮತ್ತು 8ನೇ ತರಗತಿಗಳಲ್ಲಿ ಉಳಿದಿರುವ ಸೀಟುಗಳಿಗೆ ಅರ್ಹ ವಿದ್ಯಾರ್ಥಿಗಳಿಗೆ ನೇರ ಪ್ರವೇಶವನ್ನು ಕಲ್ಪಿಸುವುದು.

ಮೀಸಲಾತಿ ಅಭ್ಯರ್ಥಿಗಳು ಪ್ರವೇಶವನ್ನು ಪಡೆಯಲು ಈ ಕೆಳಕಂಡ ದಾಖಲಾತಿಗಳನ್ನು ನೀಡುವುದು:-

1) ಸಫಾಯಿ ಕರ್ಮಚಾರಿಗಳ ಮಕ್ಕಳು ನಗರ/ಸ್ಥಳೀಯ ಸಂಸ್ಥೆಗಳ ಆಯುಕ್ತರು/ ಪೌರಾಯುಕ್ತರು/ಮುಖ್ಯಾಧಿಕಾರಿಗಳು ನೀಡುವ ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು.
2) ಸಮಾಜ ಕಲ್ಯಾಣ ಇಲಾಖೆ/ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ/ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳು ನಡೆಸುತ್ತಿರುವ ಆಶ್ರಮ ಶಾಲೆಯ ವಿದ್ಯಾರ್ಥಿಗಳು ಆಯಾ ಆಶ್ರಮ ಶಾಲೆಯ ಮುಖ್ಯೋಪಾಧ್ಯಾಯರಿಂದ ಪ್ರಮಾಣ ಪತ್ರ ಹಾಜರುಪಡಿಸತಕ್ಕದ್ದು.
3) ವಿಶೇಷ ದುರ್ಬಲ ವರ್ಗಗಳಾದ ದೇವದಾಸಿ/ಯೋಜನಾ ನಿರಾಶ್ರಿತರ/ಹೆಚ್.ಐ.ವಿ. ಪೀಡಿತರ/ತಂದೆ ಅಥವಾ ತಾಯಿ ಇಲ್ಲದ (Single Parent) ಅವರುಗಳ ಮಕ್ಕಳು ಮತ್ತು ಅನಾಥ/ಬಾಲ ಕಾರ್ಮಿಕ ಮಕ್ಕಳು – ಸರ್ಕಾರದ ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಣ ಪ್ರಮಾಣ ಪತ್ರ ಹಾಜರು ಪಡಿಸತಕ್ಕದ್ದು.

...3

4)ಮಾಜಿ ಸೈನಿಕರ/ಸೈನಿಕರ ಮಕ್ಕಳು - ಸಂಬಂಧಿಸಿದ ಸೇನಾ ಕ್ಯಾಪ್ಟನ್ ಮಟ್ಟದ ಅಧಿಕಾರಿಗಳು ಅಥವಾ ಸರ್ಕಾರದ ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಣ ಪ್ರಮಾಣ ಪತ್ರ ಹಾಜರು ಪಡಿಸತಕ್ಕದ್ದು.

5)ಅಲೆಮಾರಿ, ಅರೆಅಲೆಮಾರಿ, ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ವರ್ಗದವರಿಗೆ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗಗಳು) - ಸಮಾಜ ಕಲ್ಯಾಣ ಇಲಾಖೆಯಿಂದ(ಆದೇಶ ಸಂಖ್ಯೆ ಸಕಇ 10 ಎಸ್ಎಲ್‌ಪಿ 2015 ದಿನಾಂಕ 12-01-2016) ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹೊರಡಿಸಿರುವ ಆದೇಶಗಳಲ್ಲಿರುವ ಜಾತಿಗಳ ಮಕ್ಕಳು ಅವರವರ ಜಾತಿ ಪ್ರಮಾಣ ಪತ್ರಗಳನ್ನು ಹಾಜರುಪಡಿಸತಕ್ಕದ್ದು.

(ಬಿ.ಎನ್.ಸುಮತಿ) 25/4/17
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

ಗೆ:

1) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ.
2) ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.
3) ನಿರ್ದೇಶಕರು,ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ.
4) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.
5) ಜಂಟಿ ನಿರ್ದೇಶಕರು/ಉಪ ನಿರ್ದೇಶಕರು/ಪರಿಶಿಷ್ಟ ಪಂಗಡದ ಜಿಲ್ಲಾ ಕಲ್ಯಾಣಾಧಿಕಾರಿಗಳು - ಸಮಾಜ ಕಲ್ಯಾಣ ಇಲಾಖೆ/ಪರಿಶಿಷ್ಟ ಪಂಗಡದ ಕಲ್ಯಾಣ ಇಲಾಖೆ/ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.
6) ಎಲ್ಲಾ ಜಿಲ್ಲಾಧಿಕಾರಿಗಳು.
7) ಎಲ್ಲ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು.
8) ಕಛೇರಿ ಪ್ರತಿಗಳು

ಕವಶಿಸಸ/ಸಂಖ್ಯೆ: ಮೊದೇಶಾ/ ಸೀ.ಹಂಚಿಕೆ//2017-18

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
ಬೆಂಗಳೂರು, ದಿನಾಂಕ:04.05.2017

ಸರ್ಕಾರದ ಸುತ್ತೋಲೆಯನ್ವಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಹಾಗೂ ವಸತಿ ಶಾಲೆಗಳ ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕೈಗೊಳ್ಳಲು ತಿಳಿಸಿದೆ.

3/5/17
ಕಾರ್ಯನಿರ್ವಾಹಕ ನಿರ್ದೇಶಕರು